ಹೊರಬರಬೇಡಿ. ಸರ್ಕಾರ ರಕ್ಷಣೆಗೆ ಅಗತ್ಯವಾದ ಕ್ರಮಗಳನ್ನು ಯುದ್ಧದೋಪಾದಿಯಲ್ಲಿ ಕೈಗೊಂಡಿದೆ. ಸುರಕ್ಷತೆಗಾಗಿ ಮುನ್ನೆಚ್ಚರಿಕೆಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಿಮ್ಮ ರಕ್ಷಣೆಯ ಕಡೆ ಎಚ್ಚರವಿರಲಿ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಿ. ನಿಮ್ಮೊಡನೆ ನಾವಿದ್ದೇವೆ... ನಮ್ಮೊಡನೆ ಸಹಕರಿಸಿ."

ಪ್ರಧಾನಿಯ ಮಾತು ಮುಗಿದ ಮೇಲೆ ಟೀವಿಯಲ್ಲಿ ಸುನಾಮಿಯ ಬೀಭತ್ಸ ದೃಶ್ಯಗಳ ಪ್ರಸಾರ ಪ್ರಾರಂಭವಾಗಿತ್ತು. ನಡುನಡುವೆ ವಾರ್ತೆಗಳ ಪ್ರಸಾರ. ಶ್ಯಾಮಲಾ, ಜಿತೇಂದ್ರ ಆಸಕ್ತಿಯಿಂದ ನೋಡುತ್ತಿದ್ದರು.

ಫೆಸಿಫಿಕ್ ಮಹಾಸಾಗರದಲ್ಲಿ ಭಾರೀ ಭೂಕಂಪ. ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ ಒಂಬತ್ತರಷ್ಟು!

ತೀವ್ರ ಭೂಕಂಪನದ ನಂತರ ಬಲಾಢ್ಯ ಸುನಾಮಿ 'ಮಿಯಾಕೋ ಸಿಟಿ' ಮೇಲೆ ಬಲವಾಗಿ ಅಪ್ಪಳಿಸಿ ಇಡೀ ನಗರವನ್ನೇ ಮುಳುಗಿಸಿಬಿಟ್ಟಿದೆ. ಜಪಾನಿನಲ್ಲಿ ನೆಲ ನಡುಗಿದ್ದರಿಂದ ಭವನಗಳು, ದೊಡ್ಡ ಕಟ್ಟಡಗಳು, ಮನೆಗಳು ಕುಸಿದು ಬೀಳುತ್ತಿವೆ. ವಾಹನಗಳು ಕೊಚ್ಚಿಹೋಗುತ್ತಿವೆ. ತಪ್ಪಿಸಿಕೊಳ್ಳುವ ಅವಕಾಶಗಳಿಲ್ಲದೆ ಜನರು ಸುನಾಮಿಯ ಬೃಹತ್ ಅಲೆಗಳಿಗೆ ಸಿಲುಕಿ ಸಮುದ್ರಕ್ಕೆ ಬಲಿಯಾಗುತ್ತಿದ್ದಾರೆ.

ಫುಕುಶಿಮಾ ಅಣು ವಿದ್ಯುತ್ ಸ್ಥಾವರದಿಂದ ಅಣು ವಿಕಿರಣ ಸೋರಿಕೆಯಾಗುವ ಸಂಭವವಿದೆ. ಇಷ್ಟು ದೊಡ್ಡ ಭೂಕಂಪವನ್ನು ಕಳೆದ ತೊಂಬತ್ತು ವರ್ಷಗಳಲ್ಲಿ ಜಪಾನ್ ಕಂಡಿರಲಿಲ್ಲ. ಭೂಮಿ ನಡುಗಿ ಭೀಕರ ಸುನಾಮಿ ಅಪ್ಪಳಿಸಿದಾಗ ಎಲ್ಲವೂ ತತ್ತರಿಸಿದ್ದವು.

ಅಣು ವಿದ್ಯುತ್ ಸ್ಥಾವರದಲ್ಲಿ ಉತ್ಪಾದನೆ ನಿಂತು ಹೋಗಿ, ಅದರ ಪರಿಣಾಮವಾಗಿ ನಗರದ ಬಹುತೇಕ ಪ್ರದೇಶಗಳಲ್ಲಿ ವಿದ್ಯುತ್ ಇಲ್ಲದೆ ಜನ ಪರದಾಡುವಂತಾಯ್ತು.

'ಸೆಂದಾಯ್' ನಗರದ ವಿಷಯವನ್ನಂತೂ ಹೇಳುವಂತೆಯೇ ಇಲ್ಲ. ಎತ್ತ ನೋಡಿದರತ್ತ ಬರೀ ಶವಗಳೇ!

ಸಾರಿಗೆ ಸಂಪರ್ಕವಂತೂ ಸಂಪೂರ್ಣ ಸ್ಥಗಿತಗೊಂಡಿತ್ತು. ಅಷ್ಟರಲ್ಲಿ ವಿದ್ಯುತ್ ನಿಂತುಹೋಯಿತು. ಅದೃಷ್ಟವಶಾತ್ ಎಮರ್ಜೆನ್ಸಿ ಲೈಟ್‌ಗಳು ಹತ್ತಿಕೊಂಡವು. ಟೀವಿ ಮತ್ತೆ ಆನ್ ಆಯಿತು.

ಅಣು ಸ್ಥಾವರಗಳಲ್ಲಿ ಬೆಂಕಿ ಕಾಣಿಸಿಕೊಂಡು, ಫುಕುಶಿಮಾ ಅಣು ಸ್ಥಾವರದಲ್ಲಿ ಸ್ಫೋಟ ಉಂಟಾಗಿ ಬೆಂಕಿ ಹೊತ್ತಿಕೊಂಡ ಕಾರಣ ಕಾರ್ಮಿಕರನ್ನು ಸ್ಥಾವರದಿಂದ ಹೊರಗೆ ಕಳುಹಿಸಲಾಗುತ್ತಿದೆ. ಪ್ರಸ್ತುತ ಅತ್ಯಗತ್ಯ ಸಿಬ್ಬಂದಿ ಮಾತ್ರ ಅಲ್ಲಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಲಾಗುತ್ತಿತ್ತು. ಮೂರು ಸ್ಥಾವರಗಳಲ್ಲಿ ಅಣು ಇಂಧನ ಪಾಕ್ಷಿಕವಾಗಿ ಕರಗಿರಬೇಕು, ಅಣು ಸ್ಥಾವರದಿಂದ ವಿಕಿರಣಯುಕ್ತ ನೀರು ಸೋರಿಕೆಯಾಗುವ ಸಾಧ್ಯತೆಗಳಿವೆ ಎಂಬ ಅಭಿಪ್ರಾಯವನ್ನು ವಿಜ್ಞಾನಿಗಳು ವ್ಯಕ್ತಪಡಿಸುತ್ತಿದ್ದಾರೆ. ಈ ಸಮಯದಲ್ಲಿ ಮಳೆ ಏನಾದರೂ ಸುರಿದರೆ, ಅದು ವಿಕಿರಣ ಮಳೆಯಾಗಿ ಬದಲಾಗಿ ಮನುಷ್ಯರ ದೇಹದ ಮೇಲೆ ವಿಪರೀತ ಪರಿಣಾಮ ಉಂಟುಮಾಡುತ್ತದೆ. ಅದು ಕ್ಯಾನ್ಸರಿಗೂ ಕಾರಣವಾಗಬಹುದು. ವಾತಾವರಣದಲ್ಲಿ ಹೆಚ್ಚಾಗಿ ಬೆರೆತರೆ ಅದು ಏಷ್ಯಾದ ಇತರ ದೇಶಗಳಿಗೂ ಪಸರಿಸುವ ಸಾಧ್ಯತೆ ಇದೆ. ಆಗ ಆ ದೇಶಗಳಿಗೂ ಅಪಾಯ ಕಟ್ಟಿಟ್ಟ ಬುತ್ತಿ. ಅಲ್ಲಿಯೂ ವಿಕಿರಣ ಮಳೆ ಬೀಳುತ್ತದೆ.

ಪ್ರಸ್ತುತ 'ಸೆಂದಾಯ್'ನ ವಿಮಾನ ನಿಲ್ದಾಣ ಸಂಪೂರ್ಣ ಜಲಾವೃತಗೊಂಡಿದೆ.

'ಇವಾನುಮ' ಪಟ್ಟಣದಲ್ಲಿ ಸಮುದ್ರದ ಭಾರೀ ಗಾತ್ರದ ಅಲೆಗಳು ಭೀಭತ್ಸ ದೃಶ್ಯಗಳನ್ನು